# ಮುರುಘಾ ಮಠದಲ್ಲಿ ಕಲ್ಯಾಣ ಮಹೋತ್ಸವ ಸುದ್ದಿ

ಚಿತ್ರದುರ್ಗ, ಮಾ. 5 - ನಿಸರ್ಗ ಮಾನವನ ಆಯುಷ್ಯವನ್ನು ಅಳೆಯುತ್ತದೆ. ಸೂರ್ಯ ಹಸ್ತಂಗತನಾಗುವಾಗ ಒಂದೊಂದು ದಿನ ತೆಗೆದುಕೊಂಡು ಹೋಗುತ್ತಾನೆ. ಹಾಗಾಗಿ ಮಾನವ ಬದುಕಿನಲ್ಲಿ ಮನೆ ಮಠಗಳನ್ನು ಕಟ್ಟುವಂತೆ ಪ್ರಾಮಾಣಿಕತೆ ಮೂಲಕ ಜೀವನವನ್ನು ಕಟ್ಟಿಕೊಳ್ಳಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ) ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೆ ವರ್ಷದ ಮೂರನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಬಡವರ ಮದುವೆ ಮಾಡಲೆಂದೆ ಕಟ್ಟಿದ ಅನುಭವ ಮಂಟಪ ಇದು. ಜನನದ ಜೊತೆಯಲ್ಲಿ ಜೀವನ ಇದೆ, ಮುಪ್ಪಾವಸ್ಥೆ ಇದೆ, ನಂತರ ಸಾವು ಇದೆ. ಆದರೆ ಜೀವನವನ್ನು ಕೇಂದ್ರೀಕರಿಸಬೇಕು. ಜೀವನ ಎಂದರೆ ಏನೆಂದು ಕೆಲವರನ್ನು ಕೇಳಿದರೆ ಹಣ ಎನ್ನುತ್ತಾರೆ. ಇನ್ನು ಕೆಲವರು ಜೀವನವೆಂದರೆ ಸುಖಪಡಲು ಇದೆಯೆನ್ನುತ್ತಾರೆ. ಆಟಗಾರರನ್ನು ಕೇಳಿದರೆ ಜೀವನ ಎಂದರೆ ಆಟ ಎನ್ನುತ್ತಾರೆ. ಧಾರ್ಮಿಕರನ್ನು ಕೇಳಿದರೆ ಜೀವನ ಎಂದರೆ ದೇವರನ್ನು ಕಾಣುವ ದಾರಿ ಎನ್ನುತ್ತಾರೆ. ಆದರೆ ಜೀವನ ಎಂದರೆ ಜವಾಬ್ದಾರಿ, ಕರ್ತವ್ಯ ಎನ್ನಬೇಕು. ಸಂಸಾರ ಬಹಳ ಭಾರ. ಸಂಸಾರವನ್ನು ಎಳೆದುಕೊಂಡು ಹೋಗುವುದು ಸುಲಭವಲ್ಲ. ಪ್ರಾಣಿಗಳಿಗೆ ಒಂದೇ ಹೆಗಲು. ಆದರೆ ಮಾನವನಿಗೆ ಎರಡು ಹೆಗಲು. ಒಂದು ಸಂಸಾರದ ಹೆಗಲು, ಮತ್ತೊಂದು ಜವಾಬ್ದಾರಿ ಹೆಗಲು. ಯಾರು ಸಹ ಹೆಣ್ಣು ಭ್ರೂಣಹತ್ಯೆ ಮಾಡಬಾರದು. ಹೆಣ್ಣಿರಲಿ, ಗಂಡಿರಲಿ ಪ್ರತಿಯೊಬ್ಬರೂ ಸಮಾನವಾದ ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಹಾಗಾಗಿ ಯಾರೂ ಭ್ರೂಣಹತ್ಯೆ ಮಾಡಬಾರದು ಎಂದು ತಿಳಿಸಿದರು.

ಸಿದ್ಧರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡಿ, ಒಂದು ಮದುವೆ ಮಾಡಿ ಸುಧಾರಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಶ್ರೀಮಠದಲ್ಲಿ 20 ಸಾವಿರಕ್ಕು ಹೆಚ್ಚು ಮದುವೆಗಳಾಗಿವೆ. ಇದು ಸಾಮಾನ್ಯ ಮಾತಲ್ಲ. ಶ್ರೀಮಠದ ಆಶ್ರಯದಲ್ಲಿ ಬಸವಮಕ್ಕಳು, ವೃದ್ಧರು ಜೀವನ ನಡೆಸುತ್ತಿದ್ದಾರೆ. ಎಲ್ಲರಿಗೂ ಆಶ್ರಯ ಕೊಡುವ ದೊಡ್ಡ ಆಲದಮರ ಇದು. ಸಂಸಾರದಲ್ಲಿ ಯಾವ ಕಾರಣಕ್ಕು ಭಿನ್ನಾಭಿಪ್ರಾಯ ಮೂಡಬಾರದು. ಸತಿ-ಪತಿಗಳು ಒಂದಾದ ಭಕ್ತಿ ಉತ್ತಮ ಸಂಸಾರಕ್ಕೆ ದಾರಿ. ಪ್ರತಿಯೊಬ್ಬರು ಪರಸ್ಪರ ಅರ್ಥ ಮಾಡಿಕೊಂಡು ಜೀವನ ಸಾಗಿಸಬೇಕು ಎಂದು ಹೇಳಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಟಿ. ಸುರೇಶ್ ಮಾತನಾಡಿ, ಮುರುಘಾ ಶರಣರು ತ್ರಿವಿಧ ದಾಸೋಹಿಗಳು ಮಾತ್ರವಲ್ಲ. ಕಲ್ಯಾಣ ಮಹೋತ್ಸವವು ಕೂಡ ದಾಸೋಹವೆ. ಯಾರೂ ಸಹ ಸಾಲದ ಹೊರೆ ಹೊತ್ತುಕೊಳ್ಳಲಾರದ ವಿವಾಹ ಮಹೋತ್ಸವವಿದು. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ 14 ಜೋಡಿಗಳ ವಿವಾಹ ನೆರವೇರಿತು.

ಚಳ್ಳಕೆರೆಯ ಶ್ರೀ ಬಸವಕಿರಣ ಸ್ವಾಮಿಗಳು, ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಆಡಳಿತ ಮಂಡಳಿ ಸದಸ್ಯ ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ ಮೊದಲಾದವರಿದ್ದರು. ಚಿನ್ಮಯಿದೇವರು ಸ್ವಾಗತಿಸಿದರು. ಹರಾರುಕ್ಷಾಮೃತ ದೇವರು ನಿರೂಪಿಸಿದರು.


ಮೂವತ್ತೆರಡನೇ ವರ್ಷ ಮೂರನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ




ಬಸವಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ).
ಇವರ ಸಹಯೋಗದಲ್ಲಿ
ಮೂರನೇ ತಿಂಗಳ
ಕಲ್ಯಾಣ ಮಹೋತ್ಸವ
ದಿನಾಂಕ : 05-03-
ಬೆಳಗ್ಗೆ 10.30
ಸ್ಥಳ : ಅನುಭವ ಮಂಟಪ
ಶರಣರು

